**ದಿನಾಂಕಃ14.05.2024 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಪಾಟೀ–ಸವಾಲುಃ ಎದುರುದಾರರ ಪರ ಶ್ರೀ.ಎಸ್ ಎಸ್ ವಕೀಲರಿಂದಃ–**

ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ಲಕ್ಷ್ಮೀದೇವಿ, ಸರಸ್ವತಿ, ಕುಮಾರಸ್ವಾಮಿ, ವಿಶ್ವನಾಥ. ನನ್ನ ಅಕ್ಕ ಮತ್ತು ನನ್ನ ವಿವಾಹ ಆಗಿರುತ್ತದೆ. ನನ್ನ ತಮ್ಮಂದಿರ ವಿವಾಹ ಆಗಿರುವುದಿಲ್ಲ. ಅವರಿಬ್ಬರೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ತಂದೆಗೆ 4 ಎಕರೆ ಜಮೀನು ಇದೆ. 5–6 ವರ್ಷಗಳಿಂದ ಅದರಲ್ಲಿ ಯಾವುದೇ ಬೆಳೆಯನ್ನು ಬೆಳೆಯುತ್ತಿಲ್ಲ. ನನ್ನ ಅಕ್ಕ ವಿವಾಹವಾಗಿ ಅವಳ ಗಂಡನ ಮನೆಯಲ್ಲಿ ವಾಸವಿದ್ದಾರೆ. ನನ್ನ ಕುಟುಂಬದಲ್ಲಿ ನನ್ನ ತಂದೆ ಮತ್ತು ತಾಯಿ ಮಾತ್ರ ಕೂಲಿ ಕೆಲಸ ಮಾಡುತ್ತಾರೆ . ನಮ್ಮ ಕುಟುಂಬಕ್ಕೆ ಒಟ್ಟು 9 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ನನ್ನ ಕುಟುಂಬದಲ್ಲಿ ದುಡಿಯುತ್ತಿದ್ದು, ಅವರನ್ನು ನಾನೇ ಸಾಕುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮಂದಿರ ವಿದ್ಯಾಭ್ಯಾಸದ ಖರ್ಚು ವೆಚ್ಚಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಏನೂ ಮಾಡಲೂ ಆಗುವುದಿಲ್ಲ ಮನೆಯಲ್ಲೇ ಇರುತ್ತಾರೆ, ನನ್ನ ತಾಯಿ ಹೊಲ ಗದ್ದೆ ಕೆಲಸ ಮಾಡುತ್ತಾರೆ. ನನ್ನ ತಾಯಿ ಹೊಲ ಗದ್ದೆ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಕುಟುಂಬದ ಸಂಪೂರ್ಣ ಜವಬ್ದಾರಿಯನ್ನು ನಾನೇ ನೋಡಿಕೊಳ್ಳುತ್ತಿದ್ದು, ನನಗೆ ಸಾಕಷ್ಟು ಆದಾಯ ಇದೆ ಎಂದರೆ ಸರಿಯಲ್ಲ.

ನಾನು ನನ್ನ ಕುಟುಂಬವನ್ನು ನೋಡಿಕೊಳ್ಳುವ ಉದ್ದೇಶದಿಂದ ಎದುರುದಾರರ ಮನೆಗೆ ಹೋಗಲು ತಯಾರಿಲ್ಲ ಎಂದರೆ ಸಾಕ್ಷಿಯು ಎದುರುದಾರರು ಎರಡನೇ ಮದುವೆ ಆಗಿರುತ್ತಾರೆ ಎಂದು ಸ್ವ ಇಚ್ಛೆಯಿಂದ ನುಡಿಯುತ್ತಾರೆ. ಎದುರುದಾರರು ಎರಡನೇ ಮದುವೆ ಆಗಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ತಂದೆಯ ಹೆಸರಿನಲ್ಲಿ ಆಸ್ತಿ ಇದ್ದು ವಿಭಾಗ ಆಗಿರುವುದಿಲ್ಲ. ಎದುರುದಾರರ ಕುಟುಂಬಕ್ಕೆ ಒಟ್ಟು 5 ಎಕರೆ ಜಮೀನು ಇದೆ. ಎದುರುದಾರರ

ತಂದೆಗೆ ಒಟ್ಟು 7 ಜನ ಮಕ್ಕಳು. ನನ್ನ ಅಕ್ಕನನ್ನು ಎದುರುದಾರರ ತಮ್ಮನಿಗೆ ವಿವಾಹ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಎದುರುದಾರರಿಗೆ ನಾನು ಅವರ ಸ್ವಂತ ಅಕ್ಕನ ಮಗಳು ಆಗಿದ್ದೆನೆ. ಎದುರುದಾರರು ಎಸ್.ಎಸ್.ಎಲ್.ಸಿ., ಓದಿದ್ದಾರೆ. ಎದುರುದಾರರು ನನಗಿಂತ ಕಡಿಮೆ ಓದಿರುವುದರಿಂದ ಅವರ ಜೊತೆಯಲ್ಲಿ ನನಗೆ ಇರಲು ಇಷ್ಟವಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನಗೆ ಪಾವಗಡ, ಮಡಕಶಿರಾ ಮತ್ತು ಚಿತ್ರದುರ್ಗದಲ್ಲಿ ನರ್ಸಿಂಗ್ ಕೆಲಸ ಮಾಡಲು ಸೇರಿಸಲು ತಯಾರಿದ್ದು ನಾನು ಒಪ್ಪಿಕೊಳ್ಳದೇ ಬೆಂಗಳೂರಿಗೆ ಕೆಲಸ ಮಾಡಲು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಕೋವಿಡ್ ಸಮಯದಲ್ಲಿ 6 ತಿಂಗಳು ಕೆಲಸ ಮಾಡಿದ್ದೇನೆ.

ಈ ಅರ್ಜಿ ಹಾಕುವ ಮೊದಲು ಎದುರುದಾರರಿಗೆ ನೋಟೀಸ್ ನೀಡಿರುತ್ತೇನೆ. ಅದಕ್ಕೆ ಎದುರುದಾರರು ಮನಗೆ ಬಂದು ಸಂಸಾರ ಮಾಡುವಂತೆ ಮರು ಉತ್ತರ ನೀಡಿದ್ದರು ಎಂದರೆ ಸರಿಯಲ್ಲ. ಎದುರುದಾರರು ನೀಡಿದ ಮರು ಉತ್ತರ ಸ್ವೀಕರಿಸಿದ ನಂತರವೂ ಅವರೊಂದಿಗೆ ಜೀವನ ಮಾಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯೊಂದಿಗೆ ಹೋಗಿ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಎದುರುದಾರರು ಲೇವಾದೇವಿ ವ್ಯವಹಾರ ಮಾಡುವ ಬಗ್ಗೆ ನಾನು ನೋಡಿದ್ದೇನೆ, ಆದರೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಎದುರುದಾರರು ರಿಯಲ್ ಎಸ್ಟೇಸ್ಟ್ ವ್ಯವಹಾರ ಮಾಡುವ ಬಗ್ಗೆ ನಾನು ನೋಡಿದ್ದೇನೆ, ಆದರೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಎದುರುದಾರರಿಗೆ ಜಮೀನಿನಿಂದ ಬರುವ ಆದಾಯದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಎದುರುದಾರರಿಗೆ ಅಡಿಕೆ, ಹತ್ತಿ, ಶೇಂಗಾ ಬೆಳೆಯಿಂದ ಒಟ್ಟು ವಾರ್ಷಿಕ ಆದಾಯ ರೂ.6,00,000/- ಬರುತ್ತದೆ. ಈ ವಿಚಾರವನ್ನು ನನ್ನ ಅರ್ಜಿಯಲ್ಲಿ ಹೇಳಿರುತ್ತೇನೆ. ಯಾವ ಯಾವ ಬೆಳೆಯಿಂದ ಎಷ್ಟು ಆದಾಯ ಬಂದಿರುತ್ತದೆ ಎಂದು

ನಿಖರವಾಗಿ ಗೊತ್ತಿಲ್ಲ. ಎದುರುದಾರರಿಗೆ ಅಡಿಕೆ, ಹತ್ತಿ, ಶೇಂಗಾ ಬೆಳೆಯಿಂದ ಒಟ್ಟು ವಾರ್ಷಿಕ ಆದಾಯ ರೂ.6,00,000/- ಬರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಲೇವಾದೇವಿ ವ್ಯವಹಾರದಿಂದ ವಾರ್ಷಿಕ ಆದಾಯ ರೂ.5,00,000/- ಹಾಗೂ ರಿಯಲ್ ಎಸ್ಟೇಸ್ಟ್ ವ್ಯವಹಾರದಿಂದ ಮಾಸಿಕ ಆದಾಯ ರೂ.55,000/- ಬರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಲೇವಾದೇವಿ ವ್ಯವಹಾರವಾಗಲೀ, ರಿಯಲ್ ಎಸ್ಟೇಸ್ಟ್ ವ್ಯವಹಾರವಾಗಲೀ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ಎದುರುದಾರರು ಮಾಡಿರುವ ರಿಯಲ್ ಎಸ್ಟೇಸ್ಟ್ ವ್ಯವಹಾರವನ್ನು ನಾನು ಕಣ್ಣಾರೆ ನೋಡಿದ್ದೇನೆ. ಆದರೆ ರಿಯಲ್ ಎಸ್ಟೇಸ್ಟ್ ವ್ಯವಹಾರದ ಸಂಪೂರ್ಣ ಮಾಹಿತಿ ಇಲ್ಲ . ಎದುರುದಾರರು ಅಂದಿನಿಂದಲೂ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರರು ಮಾನ್ಯ ಹಿರಿಯೂರು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಿವಾಹ ಹಕ್ಕಿನ ಪುನರ್ ಪ್ರಾಪ್ತಿಗಾಗಿ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿಯು ಎದುರುದಾರರು ಎರಡನೇ ವಿವಾಹ ಆದ ನಂತರ ಅದನ್ನು ಹೂಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಸದರಿ ದಾವೆಯಲ್ಲಿ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಸದರಿ ದಾವೆಯಲ್ಲಿ ಆಕ್ಷೇಪಣೆಯನ್ನು ಸಲ್ಲಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕೈತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ .

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.